ಕರ್ನಾಟಕ ಸರ್ಕಾರ

# ಕಾಲೇಜು ಶಿಕ್ಷಣ ಇಲಾಖೆ

ದೂರವಾಣಿ:080-22343904/05

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಅರಮನೆ ರಸ್ತೆ ಬೆಂಗಳೂರು-560001,

ಸಂಖ್ಯೆ:ಕಾಶಿಇ/ಶೈವಿ/67/ಶು.ವಿ/ಸುತ್ತೋಲೆ/2018-19

ದಿನಾಂಕ:28.02.2019

## ಸುತ್ತೋಲೆ

ವಿಷಯ: ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿನಿಯರಿಗೆ ಶುಲ್ಕ ವಿನಾಯಿತಿ ನೀಡುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ:ಇಡಿ 67 ಹೆಚ್‌ಪಿಯು 2018 ದಿನಾಂಕ;15.12.2018.
2) ಈ ಕಛೇರಿಯ ಆದೇಶ ಸಂಖ್ಯೆ:ಕಾಶಿಇ/ಶೈವಿ/67/ಶುಲ್ಕವಿನಾಯಿತಿ/2018-19 ದಿನಾಂಕ;23.02.2019.

* * * * * * * *

2018-19 ನೇ ಸಾಲಿನಲ್ಲಿ ಉಲ್ಲೇಖ (1) ರ ಸರ್ಕಾರದ ಆದೇಶದಲ್ಲಿ ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿನಿಯರಿಗೆ ಶುಲ್ಕ ವಿನಾಯಿತಿ ನೀಡುವ ಸಂಬಂಧ ಲೆಕ್ಕ ಶೀರ್ಷಿಕೆ 2202-03-107-1-14-106 ರಡಿ ಅನುದಾನವನ್ನು ಒದಗಿಸಲಾಗಿದ್ದು. ಅದ್ದರಂತೆ ಉಲ್ಲೇಖ (2) ರಲ್ಲಿನ ಈ ಕಛೇರಿ ಆದೇಶದಲ್ಲಿ ಇಲಾಖಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಗೆ ಕಾಲೇಜುವಾರು ವಿದ್ಯಾರ್ಥಿನಿಯರ ಸಂಖ್ಯೆಗೆ ಅನುಗುಣವಾಗಿ ಕೆ-2 ಮೂಲಕ ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಸದರಿ ಅನುದಾನದಿಂದ ಶುಲ್ಕ ಮರುಪಾವತಿಯ ಮೊತ್ತವನ್ನು ವಿದ್ಯಾರ್ಥಿನಿಯರ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಲು ಸೂಚಿಸಲಾಗಿದ್ದು ಜಮಾ ಮಾಡಲಾದ ಮೊತ್ತಕ್ಕೆ ಬಳಕೆ ಪ್ರಮಾಣ ಪತ್ರದೊಂದಿಗೆ ಈ ಕೆಳಕಂಡ ನಮೂನೆಯಲ್ಲಿ ಮಾಹಿತಿಯನ್ನು ಈ ಕಛೇರಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ.

**ಕಾಲೇಜಿನ ಹೆಸರು ಮತ್ತು ವಿಳಾಸ;**

**ಕಾಲೇಜಿಗೆ ಬಿಡುಗಡೆ ಮಾಡಲಾದ ಅನುದಾನದ ಮೊತ್ತ ರೂ.;**

| ಕ್ರ.ಸಂ | ವಿದ್ಯಾರ್ಥಿನಿಯರ ಹೆಸರು | ತರಗತಿ | ವಿದ್ಯಾರ್ಥಿನಿಯರಿಗೆ ಮರುಪಾವತಿಸಿರುವ ಶುಲ್ಕ ಮೊತ್ತ | ಬ್ಯಾಂಕ್ ಸ್ಟೇಟ್ ಮೆಂಟ್ ಅನ್ವಯ ವಿದ್ಯಾರ್ಥಿನಿಯರು ಪಡೆದ ಮೊತ್ತ | ವಿದ್ಯಾರ್ಥಿನಿಯರ ಸಹಿ |
|---|---|---|---|---|---|
| 1 | 2 | 3 | 4 | 5 | 6 |

- ಮುಂದುವರೆದು ಈಗಾಗಲೆ ನೀಡಲಾಗಿರುವ ಅನುದಾನದ ಮೊತ್ತ ವಿದ್ಯಾರ್ಥಿನಿಯರ ಶುಲ್ಕ ಮರುಭರಿಕೆಗೆ ಕೊರತೆಯುಂಟಾದಲ್ಲಿ ತಕ್ಷಣವೇ ಅಗತ್ಯವಿರುವ ಅನುದಾನಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದು.
- ಬಿಡುಗಡೆ ಮಾಡಲಾಗಿರುವ ಅನುದಾನವು ಯಾವುದೇ ಕಾರಣಕ್ಕೂ ವ್ಯಪಗತ ವಾಗದೆ ವಿದ್ಯಾರ್ಥಿನಿಯರಿಗೆ ಸಂದಾಯ ವಾಗುವಂತೆ ಕ್ರಮವಹಿಸುವುದು, ತಪ್ಪಿದ್ದಲ್ಲಿ ಪ್ರಾಂಶುಪಾಲರೆ ನೇರವಾಗಿ ಹೊಣೆಗಾರರಾಗಿರುತ್ತಾರೆ.

1/3/19

ಕಾಲೇಜು ಶಿಕ್ಷಣ ನಿರ್ದೇಶಕರು

**ಇವರಿಗೆ;**

1. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಗೆ.

**ಪ್ರತಿಯನ್ನು;**

1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ, ಕಲ್ಬುರ್ಗಿ.
2. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.